
ಡಾ. ನಿತ್ಯಾನಂದ ಸುಂಡವಾಳು



# ಅಪ್ಪನ ಟ್ರಂಕು

ಅಪ್ಪನ ಟ್ರಂಕಲಿ ಏನೇನಿಲ್ಲ
ಇರುವುದು ಪೂರ್ತಿ ಜಗವೆಲ್ಲ

ಬೀಗವ ತೆಗೆಯುವ
ರಾಗವ ಕೇಳುತ
ಟ್ರಂಕಿನ ವಿಚಿತ್ರ ವಾಸನೆ ಹೀರುತ
ಮುಕುರುತಲಿದ್ದೆವು ಸುತ್ತೆಲ್ಲ
ಬೈದರು ಇಲ್ಲ ರೇಗಿದರಿಲ್ಲ
ಟ್ರಂಕನು ತೆರೆಸದೆ ಬಿಡುವಂತಿಲ್ಲ
ಕಣ್ಣೆವೆಯಿಕ್ಕದೆ ಕಾಣುತಲಿದ್ದೆವು

ಚಿಲ್ಲರೆ ಕಾಸು
ಅಪ್ಪನೆ ಬಾಸು
ಗರಿಗರಿ ನೋಟು
ಜಾದುವೆ ಥೇಟು
ಸಿನಿಮಾ ಲೋಕ
ಕಣ್ಣಲಿ ನಾಕ
ಪುಡಿ ಪುಡಿ ಒಡವೆ
ಬಿಡುವುದೆ ಗೊಡವೆ
ಬಣ್ಣದ ಚೀಲ
ಮಾಯಾ ಜಾಲ
ಕಾಗದ ಪತ್ರ
ಬಿಡದೆಲೆ ಹತ್ರ
ಪೆನ್ನು ಶಾಯಿ
ಬಿಡುತಲಿ ಬಾಯಿ
ಆಸೆಯು ಹೆಚ್ಚಿ
ಕೈಯನು ಚಾಚಿ
ಟ್ರಂಕನು ಮುಚ್ಚಿ
ನಡೆದರು ಆಚೆ

ಅಪ್ಪನ ಟ್ರಂಕಲಿ ಏನೇನಿಲ್ಲ
ಇರುವುದು ಪೂರ್ತಿ ಜಗವೆಲ್ಲ